## ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ :- ಆಡಳಿತ ಕನ್ನಡ ಭಾಷೆ -ಸರ್ಕಾರಿ ಇಲಾಖೆ ಹಾಗೂ ಕಛೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಯಲ್ಲಿ ಆಡೆತಡೆಗಳು - ಇಲಾಖೆ/ಕಛೇರಿಯ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಿ ಆದೇಶಿಸಿದೆ.

**ಪ್ರಸ್ತಾವನೆ :**

ಆಡಳಿತ ಕನ್ನಡ ಬಳಕೆಯಲ್ಲಿ ಸಾಧಿತವಾಗಿರುವ ಪ್ರಗತಿಯ ಸಮೀಕ್ಷೆಗಾಗಿ ಹಲವಾರು ಜಿಲ್ಲೆಯಲ್ಲಿನ ವಿವಿಧ ಕಛೇರಿಗಳಿಗೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಭೇಟಿ ನೀಡಿ ಪರಿಶೀಲಿಸಿದಾಗ ಆಯಾ ಕಛೇರಿಯ ಮುಖ್ಯಸ್ಥರ ಅನಾಸಕ್ತಿ, ಅನಾದರಣೆ ಹಾಗೂ ಮುಂದಾಳತ್ವದ ಕೊರತೆಗಳು ತೀವ್ರ ಕಾರಣವೆಂಬುದು ಕಂಡುಬಂದಿದೆ.

ದಿನಾಂಕ 21-1-1984ರಂದು ನಡೆದ ಆಡಳಿತ ಕನ್ನಡ ಕಾವಲು ಸಮಿತಿಯ ನಾಲ್ಕನೆಯ ಸಭೆಯು ಅನೇಕ ಪ್ರಕರಣಗಳನ್ನು ಪರಿಶೀಲನೆ ಮಾಡಿ ಅಂತಹ ಹಲವಾರು ವಿಷಯಗಳನ್ನು ಉದಾಹರಿಸಿ, ಇವೆಲ್ಲ ಕುಂದುಕೊರತೆ, ಅಡೆತಡೆಗಳಿಗೆ ಇಲಾಖೆಯ/ಕಛೇರಿಯ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಿ, ಆಡಳಿತ ಕನ್ನಡ ಬಳಕೆಗಾಗಿ ಹೊರಡಿಸಲಾಗಿರುವ ಆದೇಶಗಳ ಉಲ್ಲಂಘನೆ ಪ್ರಕರಣಗಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿ, ಸರ್ಕಾರಕ್ಕೆ ಶಿಫಾರಸು ಕಳುಹಿಸಿದೆ.

ಸದರೀ ನಿರ್ಣಯವನ್ನು ಸರ್ಕಾರ ಒಪ್ಪಿಕೊಂಡಿದೆ.

ಸರ್ಕಾರಿ ಆದೇಶ ಕ್ರಮಾಂಕ ಡಿಪಿ.ಎ.ಆರ್ 49 ಕೆ.ಒ.ಎಲ್ 84

ಬೆಂಗಳೂರು, ದಿನಾಂಕ 16ನೇ ಜುಲೈ 1984.

ಆಡಳಿತ ಕನ್ನಡ ಬಳಕೆಯಲ್ಲಿ ಕಛೇರಿಗಳಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಉದಾಸೀನ, ಅನಾದರಣೆಗಳನ್ನು ಮನಗಂಡು ಈ ಕೆಳಗಿನ ವಿಷಯಗಳಲ್ಲಿ:-

1) ಕಛೇರಿಗಳಿಗೆ ಈಗಾಗಲೇ ಒದಗಿಸಿರುವ ಆಂಗ್ಲಭಾಷೆಯಲ್ಲಿನ ನಮೂನೆ, ರಿಜಿಸ್ಟರ್ ಮುಂತಾದವುಗಳನ್ನು ಕನ್ನಡದಲ್ಲಿ ಭರ್ತಿ ಮಾಡುವಂತೆ.

2) ಅಂತರ ಕಛೇರಿ ಪತ್ರ ವ್ಯವಹಾರ ಕನ್ನಡದಲ್ಲೇ ಬರೆಯುವಂತೆ.

3) ಕಛೇರಿ ಸಿಬ್ಬಂದಿ ಕಡತದಲ್ಲಿ, ಕನ್ನಡದಲ್ಲಿ ಟಿಪ್ಪಣಿ ಮಾಡಿದಾಗ ಮೇಲಿನ ಅಧಿಕಾರಿಗಳು - ಆಂಗ್ಲಭಾಷೆಯಲ್ಲಿ ಟಿಪ್ಪಣಿ ಮಾಡದಂತೆ.

4) ಕಛೇರಿ ಕಡತ ಮತ್ತು ಪತ್ರ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಯಾವ ತೊಂದರೆ ಇಲ್ಲದಿದ್ದರೂ ಆಂಗ್ಲ ಭಾಷೆಯನ್ನೇ ಬಳಸುವ ಪ್ರವೃತ್ತಿಯನ್ನು ಹೋಗಲಾಡಿಸುವಂತೆ.

5) ಕಛೇರಿ ಮುಖ್ಯಸ್ಥರು ಸೇರಿದಂತೆ ಕಛೇರಿಯಲ್ಲಿನ ಎಲ್ಲ ನೌಕರರೂ ಕನ್ನಡ ಬಳಕೆಗೆ ಸಂಬಂಧಿಸಿ ಆದೇಶಗಳ ಅರಿವನ್ನು ಎಲ್ಲರಿಗೂ ಉಂಟುಮಾಡುವಂತೆ.

6) ನಾಮಫಲಕಗಳನ್ನು ತಕ್ಷಣ ಕನ್ನಡಕ್ಕೆ ಬದಲಾವಣೆ ಮಾಡುವಂತೆ.

7) ಆಂಗ್ಲ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಕಲಿಯಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಸಮಾಲೋಚಿಸಿ ವ್ಯವಸ್ಥೆ ಮಾಡುವಂತೆ ಮತ್ತು

8) ಕನ್ನಡ ಬಳಕೆಗೆ ಸರ್ಕಾರ ಹೊರಡಿಸುವ ಆದೇಶಗಳ ಮತ್ತು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಕಛೇರಿಗೆ ಭೇಟಿ ನೀಡುವ ಕಾಲದಲ್ಲಿ ಅನುಸರಿಸಬೇಕಾದ ಕ್ರಮಗಳಿಗೆ ಸಂಬಂಧಿಸಿದ ಆದೇಶಗಳ ಉಲ್ಲಂಘನೆಯಾಗದಂತೆ.

ನೋಡಿಕೊಳ್ಳಲು ಆಯಾ ಇಲಾಖೆ/ ಕಛೇರಿಯ ಪ್ರತಿ ಮುಖ್ಯಸ್ಥರನ್ನೇ ಪೂರ್ಣ ಹಾಗೂ ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿದೆ. ಈ ವಿಷಯಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದವರ ಮೇಲೆ ಸರ್ಕಾರಿ ಆದೇಶಗಳ ಉಲ್ಲಂಘನೆಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಮೈ. ಕೃ. ವೆಂಕಟೇಶನ್
ಅಪರ ಮುಖ್ಯ ಕಾರ್ಯದರ್ಶಿ